

# ಕಮಲ್ ವಿಶ್ವರೂಪ!

ಸಾಮಾನ್ಯವಾಗಿ ಸಿನಿಮಾ ಮಂದಿ ಯಾವುದೇ ಹೊಸ ಸಿನಿಮಾ ಆರಂಭಿಸಿದರೂ ಪತ್ರಕರ್ತರು ವಿಚಾರಿಸಿದಾಗ, 'ಇದು ಡಿಫರೆಂಟ್ ಸಿನಿಮಾ' ಎನ್ನುವುದು ಮಾಮೂಲಿಯಾಗಿದೆ. ಆದರೆ ಕಮಲಹಾಸನ್ ಮಾತ್ರ ಡಿಫರೆಂಟ್ ಎನ್ನುವುದನ್ನು ಮಾತಿನಲ್ಲಿ ಹೇಳದೆ ಕೃತಿಯಲ್ಲೇ ಮಾಡಿ ತೋರಿಸುವಾತ. ಕಮಲಹಾಸನ್ ಸಿನಿಮಾಗಳು ಹಿಟ್ ಆಗಲಿ, ಆಗದಿರಲಿ; ಪ್ರೇಕ್ಷಕರಿಗೆ ಮಾತ್ರ ಯಾವತ್ತೂ ಡಿಫರೆಂಟ್ ಅನುಭವವನ್ನೇ ನೀಡುತ್ತವೆ.

ಸದ್ಯಕ್ಕೆ ಅಮೆರಿಕಾ ಮತ್ತು ಕೆನಡಾದಲ್ಲಿ 'ವಿಶ್ವರೂಪಂ' ಚಿತ್ರದ ಶೂಟಿಂಗ್‌ನಲ್ಲಿ ತೊಡಗಿರುವ ಕಮಲ್, ಈ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಹುಟ್ಟಿಸಿದ್ದಾರೆ. 170 ಕೋಟಿ ರೂಪಾಯಿ ಬಜೆಟ್‌ನ ಚಿತ್ರ ಎನ್ನುವುದೇ ಮೊದಲ ದೊಡ್ಡ ಸುದ್ದಿ. ತಮಿಳು ಮತ್ತು ಹಿಂದಿ ಎರಡೂ ಭಾಷೆಗಳಲ್ಲಿ ಚಿತ್ರ ತಯಾರಾಗುತ್ತಿದೆ. ವಿಶೇಷವೆಂದರೆ, ನಟಿ ಪೂಜಾ ಕುಮಾರ್, ಖಳನಟ ರಾಹುಲ್ ಬೋಸ್ ಸಹಿತ ಚಿತ್ರದಲ್ಲಿ ನಟಿಸುವ ಎಲ್ಲ ನಟರೂ ಎರಡೂ ಭಾಷೆಗಳನ್ನು ತಿಳಿದುಕೊಂಡಿರಬೇಕು ಎನ್ನುವುದು ಕಮಲ್ ಒಡ್ಡಿದ ಶರತ್ತು. 'ಡಬ್ಬಿಂಗ್‌ನಲ್ಲಿ ನನಗೆ ನಂಬಿಕೆಯಿಲ್ಲ. ಎರಡೂ ಭಾಷೆಗಳ ಸ್ವರೂಪ ಬೇರೆಯಾಗಿರುವುದರಿಂದ ಪ್ರತ್ಯೇಕವಾಗಿಯೇ ಶೂಟಿಂಗ್ ನಡೆಸಬೇಕು' ಎಂದಿದ್ದಾನೆ ಕಮಲ್.

ಆರಂಭದಲ್ಲಿ ಈ ಚಿತ್ರ ತೆಲುಗು ಸಹಿತ ಮೂರು ಭಾಷೆಗಳಲ್ಲಿ ತಯಾರಾಗುತ್ತದೆ ಎಂಬ ಸುದ್ದಿ ಹಬ್ಬಿತ್ತು. ಆದರೆ ಅದ್ಯಾಕೋ ಕೊನೆಗೆ ಎರಡು ಭಾಷೆಗಳಿಗೆ ಸೀಮಿತವಾಯಿತು. ಅಂದ ಹಾಗೆ ಕಮಲ್ ಈ ಚಿತ್ರಕ್ಕಾಗಿಯೇ ನೃತ್ಯ ಗುರು ಬಿರ್ಜು ಮಹಾರಾಜ್‌ರಿಂದ ವಿಶೇಷವಾಗಿ ಕಥಕ್ ಕಲಿತಿದ್ದಾರೆ. ಸಾಗರ ಸಂಗಮಂ ಚಿತ್ರದಲ್ಲಿ ಆ ಕಾಲದಲ್ಲೇ ಭರತನಾಟ್ಯಂ ಪ್ರದರ್ಶಿಸಿದ್ದ ಕಮಲ್ ಪಾತ್ರವೊಂದನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧ ಎನ್ನುತ್ತಾರೆ ಆತನನ್ನು ಬಲ್ಲವರು.

ಈ ಸಿನಿಮಾದ ಕಥೆಯ ಬಗ್ಗೆಯೂ ನೂರೆಂಟು ಕಥೆಗಳಿವೆ. ಆರಂಭದಲ್ಲಿ ಬಂದ ಗಾಳಿಸುದ್ದಿಯ ಪ್ರಕಾರ, ಈ ಸಿನಿಮಾಕ್ಕೆ 2001ರಲ್ಲಿ ತೆರೆಗೆ ಬಂದ ಹಾಲಿವುಡ್‌ನ ಮನೋವೈಜ್ಞಾನಿಕ ಥ್ರಿಲ್ಲರ್ 'ಹನ್ನಿ ಬಾಲ್' ಸ್ಫೂರ್ತಿ ಇದೆ! ಆದರೆ ಕಳೆದ ಎಂಟು ತಿಂಗಳಿಂದ ಶೂಟಿಂಗ್ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈಗ ಕೇಳಿ ಬರುತ್ತಿರುವ ಸುದ್ದಿಯೆಂದರೆ, ಬಾಲಿವುಡ್‌ನ ಸೂಪರ್ ಹಿಟ್ 'ಮಿಶನ್ ಇಂಪಾಸಿಬಲ್' ಸಿನಿಮಾದ ಸೀಕ್ವೆಲ್ ಮಾದರಿಯಲ್ಲಿದೆ ಎನ್ನುವುದು!

ಏನೇ ಆದರೂ ಕಮಲ್ ಚಿತ್ರದ ಪೂರ್ತಿ ಗುಟ್ಟು ಬಿಟ್ಟುಕೊಟ್ಟಿಲ್ಲ. ಅಮೆರಿಕಾದಲ್ಲಿ ಶೂಟಿಂಗ್ ನಡೆಸಲು ಚಿತ್ರತಂಡಕ್ಕೆ ಅಮೆರಿಕಾ ವೀಸಾ ನಿರಾಕರಿಸಿದ್ದು ಒಮ್ಮೆ ಸುದ್ದಿಯಾಯಿತು. ಆಗ ಕಮಲ್ ಕೆನಡಾ ಆಯ್ಕೆ ಮಾಡಿಕೊಂಡರು. ಅಲ್ಲಿಂದ ಚಿತ್ರತಂಡ ಜೋರ್ಡಾನ್‌ಗೂ ಪಯಣಿಸಲಿದೆಯಂತೆ.

2012ರಲ್ಲಿ ಕಮಲ್ ತನ್ನ ಅಭಿಮಾನಿಗಳಿಗೆ ಹೆಚ್ಚು ಸಂತೋಷ ಕೊಡುವ ಸಾಧ್ಯತೆಗಳು ಅಧಿಕವಾಗಿವೆ. 'ರಂಡಾಂ ಓಘಂ' (ಎಂ.ಟಿ. ವಾಸುದೇವ ನಾಯರ್ ಕಾದಂಬರಿ ಆಧಾರಿತ) ಎನ್ನುವ ಮಲಯಾಳಂ ಚಿತ್ರ, 'ಫೋರ್ ಫ್ರೆಂಡ್ಸ್' ಎನ್ನುವ ತೆಲುಗು ಚಿತ್ರ ಹಾಗೂ '500 ಬಿ.ಸಿ' ಎನ್ನುವ ಇನ್ನೊಂದು ತೆಲುಗು ಚಿತ್ರ– ಹೀಗೆ 2012ರಲ್ಲಿ ಕಮಲ್ ಚಿತ್ರಗಳ ಕ್ಯೂ ಉದ್ದವಾಗಿದೆ.

■ ಬಿಂದು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65